1887ನೇ ಇಸವಿ ಸೆಪ್ಟಂಬರ್ ಮಾಹೇ 17ನೇ ಮಕ್ಕಂ ನೇ ನಂಬರು ಇಸ್ತಿಹಾರ್‌ವಾಮೆಯ ಪ್ರಕಾರ ರಿಯಾಯಿತ್ ಪರತ್ತುಗಳ ಮೇಲೆ ಹೊಸದಾಗಿ ಸೊಸಿಗಳನ್ನು ಹಾಕಿ ಬಾಗಾಯಿತು ಸಾಗುವಳೇ *[ಅಭಿವೃದ್ಧಿ] ಮಾಡುವ ಬಗ್ಗೆ ಈ ಕೆಳಗೆ ನಮೂದಾಗುವ ಜಮಿನನ್ನು ನಿನಗೆ ಕೊಡಲ್ಪಟ್ಟಿದೆ.

ಜಮಿನಿನ ತಪಶೀಲು.

ತಾಲ್ಲೂಕು.	ಗ್ರಾಮ.	ಜಮಿನಿನ ನಂಬರು.	ಬೀಜವತಿ. ಎಕರೆ.	ಗುಂಟೆ.	ಸರಕಾರದ ಬಂಜರು ಜಮಿನು ಆಕಾರ ಕಂಡದ್ದೋ ಕಾಣದ್ದೋ.	ಜಮಿನು ಆಕಾರಕಂಡ ದ್ದಾದರೆ ಹಾಲೀ ಖುಷ್ಕಿ ತರಿ ಯಾ ಬಾಗಾಯಿತೇ.	ಹಾಲಿ ಆಕಾರ. ರೂ.	ಆ.	ಪೈ.	ಪರಾ.

2. ಮೇಲ್ಕಂಡ ಜಮಿನಿಗೋಸ್ಕರ ಈ ಕೆಳಗೆ ನಮೂದಾಗುವ ಮೇರೆ ಕಂದಾಯವನ್ನು ಕೊಡತಕ್ಕದ್ದು.

ಸಂವತ್ಸರ.	ಇಸವಿ.	ಸಾಲೀಯಾನಾ ಕಂದಾಯ. ರೂ.	ಆ.	ಪೈ.	ಮೊಕರರಾಗಿರುವ ಕಂದಾಯದ ದರ.
1	2	3			4
1ನೇ ಸಂವತ್ಸರ	188—8	..	..	..	ಎಕರೆ 1ಕ್ಕೆ 4 ಆಣೆ ಮೇರೆ.
2ನೇ ಡಿಟೋ					ಡಿಟೋ
3ನೇ ಡಿಟೋ					ಡಿಟೋ
4ನೇ ಡಿಟೋ					ಡಿಟೋ
5ನೇ ಡಿಟೋ					ಡಿಟೋ
6ನೇ ಡಿಟೋ					ಡಿಟೋ
7ನೇ ಡಿಟೋ					ಡಿಟೋ
8ನೇ ಡಿಟೋ					ಡಿಟೋ
9ನೇ ಡಿಟೋ					ಡಿಟೋ
10ನೇ ಡಿಟೋ					ಡಿಟೋ †[ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ದರದ ಚತುರ್ಥಾಂಶ]
11ನೇ ಡಿಟೋ					ಡಿಟೋ †[ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ದರದ ಅರ್ಧಾಂಶ]
12ನೇ ಡಿಟೋ					ಡಿಟೋ †[ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ದರದ ಮುಕ್ಕಾಲುಭಾಗ]
13ನೆ ಡಿಟೋ					ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ದರದ ಚತುರ್ಥಾಂಶ †[ಎಕರೆ 1ಕ್ಕೆ ರೂ. ಮೇರ ಬಾಗಾಯಿತು ಪೂರಾ ದರ]
14ನೇ ಡಿಟೋ					ಎಕರೆ 1ಕ್ಕೆ ರೂ. ಮೇರ ಬಾಗಾಯಿತು ದರದ ಅರ್ಧಾಂಶ
15ನೇ ಡಿಟೋ					ಎಕರೆ 1ಕ್ಕೆ ರೂ. ಮೇರ ಬಾಗಾಯಿತು ದರದ ಮುಕ್ಕಾಲು ಭಾಗ.
16ನೇ ಸಂವತ್ಸರದ ಲಾಗಾಯತು.					ಎಕರೆ 1ಕ್ಕೆ ರೂ. ಮೇರೆ ಬಾಗಾಯಿತು ಪೂರಾ ದರ.

ನೋಟ * 7ನೇ ರೂಲಿನ ಪ್ರಕಾರ ಕೊಡಲ್ಪಡುವ ಕೌಲ್‌ನಾಮಾಗಳಲ್ಲಿ ಇದು ದಾಖಲಾಗತಕ್ಕದ್ದು.

ನೋಟ್ † 1 B ರೂಲ್ ಮೇರೆ ಕೊಡಲ್ಪಡುವ ಮೈದಾನಿನಲ್ಲಿರುವ ಅಡಿಕೇ ತೋಟಗಳಿಗೂ ಸವಸ್ತ ತೆಂಗಿನ ತೋಟಗಳಿಗೂ ಇದು ದಾಖಲುಗತಕ್ಕದ್ದು.

3. ಈ ತಖ್ತೆಯ 4ನೇ ಹೆಡ್ಡಿನಲ್ಲಿ ನಮೂದಾಗಿರುವ ಬಾಗಾಯಿತು ಕಂದಾಯದ ದರವು ತಾಲ್ಲೂಕಾಮುಳಿ *[ಸರ್ವೇ ಸೆಟ್ಲ್‌ಮೆಂಟ್ ಪೇಳೆ] ಸರ್ವೇ ಸೆಟ್ಲ್‌ಮೆಂಟ್ ತಿದ್ದುಪಾಟಾಗುವ ವೇಳೆ ಬದಲಾವಣೆಗೆ ವಳಪಟ್ಟಿರುತ್ತೆ.

4. ಈ ತಾರೀಖು ಲಾಗಾಯಿತು 2†(5) ಸಂವತ್ಸರಗಳೊಳಗೆ ಮೇಲ್ಕಂಡ ಎಲ್ಲಾ ಪ್ರದೇಶದಲ್ಲಿಯೂ ಸೊಸಿಗಳನ್ನ ಹಾಕಿರಬೇಕು ಇದಕ್ಕೆ ತಪ್ಪಿದಲ್ಲಿ 3ನೇ †[6ನೇ] ಸಂವತ್ಸರದ ಲಾಗಾಯಿತು ನೀನು ತೆಗದುಕೊಂಡಿರುವ ವಿಷ್ಟ ಜಮೀನಿಗೂ ಬಾಗಾಯಿತು ಪೂರಾ ದರವಾದ ಎಕರೆ 1ಕ್ಕೆ ರೂಪಾಯಿನಂತೆ ನಿನ್ನಿಂದಾ ಪೂರಾ ಕಂದಾಯ ವಸೂಲ್ಮಾಡುವದು. ‡ [ಶಿವಾಯಿ ಮೇಲ್ಕಂಡ ಜಮೀನಿನಲ್ಲಿ ಈಗ ಇರುವ ಮರಗಳ ಕಿಮ್ಮತಿನ ಅಂದಾಜು ಮೊಬಲಗು ರೂಪಾಯಿಗಳು ಜುರ್ಮಾನೆಯ ತರೀಕ್ ಕಂದಾಯದ ಬಾಕಿಯಂತೆ ನಿನ್ನಿಂದಾ ವಸೂಲ್‌ಮಾಡಲ್ಪಡುವದು.]

5. ನೀನು ತೆಗದುಕ್ಕೊಂಡಿರುವ ಜಮೀನ್ ವಿಷ್ಟಕ್ಕೂ 4ನೇ ಪ್ಯಾರಾದಲ್ಲಿ ನಮೂದಾಗಿರುವ ವಾಯಿದೆ ವಳಗೆ ಸೊಸಿಗಳನ್ನು ಹಾಕಲು ಅನುಕೂಲಿಸದಿದ್ದರೆ ಮೇಲ್ಕಂಡ ಜಮೀನಿನ ಯೆಕೆ ಎಷ್ಟು ಭಾಗವನ್ನಾದರೂ 10 ಎಕರೆಗಳಿಗೆ ಕಮ್ಮಿ ಇಲ್ಲದಂತೆ ಬಂದೇ ಪ್ರದೇಶದಲ್ಲಿರತಕ್ಕ ತಾಕುಗಳನ್ನು ನೀನು ರಾಜೀನಾಮೆ ಕೊಡಬಹುದು.

6. ಎರಡನೇ ಪ್ಯಾರಕ್ಕೆ ಸೇರಿರುವ ತಖ್ತೆಯಲ್ಲಿ ನಮೂದಾಗಿರುವ ಮೇರೆ ಸರಕಾರಕ್ಕೆ ಸಾಲೀಯಾನಾ ಸಲ್ಲಬೇಕಾದ ಕಂದಾಯವು ಈ ಡಿಸ್ಟ್ರಿಕ್ಟಿನಲ್ಲಿ ಕಂದಾಯದ ವಸೂಲಿಗೋಸ್ಕರ ಮೊಕರರಾಗಿರುವ ಖಿಸ್ತು ಬಂದಿ ಅನುಸರಿಸಿ ವಸೂಲ್ಮಾಡಲ್ಪಡುತ್ತೆ.

ಈ ಕೌಲ್‌ನಾಮಾ ನಮ್ಮ ದಸ್ತತ್ ಮೊಹರ್‌ನಿಸಿ 18 ನೇ ಇಸವಿ ಮಾಹೆ ಮುಕ್ತಂನಲ್ಲು ಕೊಡಲ್ಪಟ್ಟಿದೆ.

ಡೆಪ್ಯುಟಿ ಕಮ್ಮಿಷನರ್,
ಡಿಸ್ಟ್ರಿಕ್ಟು.

'ನೋಟ್ * ಸೆಟ್ಲ್‌ದ ತಾಲ್ಲೂಕುಗಳಲ್ಲಿ ಇದನ್ನು ದಾಖಲ್ಮಾಡಲವಶ್ಯಕವಿಲ್ಲ.

† 50 ಎಕರೆಗಳಿಗಿಂತ ಜಾಸ್ತಿಯಾಗಿರುವ ಜಮೀನಿನ ಸಂದರ್ಭದಲ್ಲಿ ಮಾತ್ರ ಇದು ದಾಖಲಾಗತಕ್ಕದ್ದು.

‡ ಹತ್ತು ರೂಪಾಯಿಗಳಿಗಿಂತ ಜಾಸ್ತಿ ಬೆಲೆಯಾಗುವಷ್ಟು ಮರಗಳಿರುವ ಸರ್ಕಾರದ ಬಂಜರು ಜಮೀನು ಕೊಡಲ್ಪಡುವ ಸಂದರ್ಭದಲ್ಲಿ ಮಾತ್ರ ಇದು ದಾಖಲಾಗತಕ್ಕದ್ದು.

ಇಸ್ತಿಹಾರ್‌ನಾಮ.

ನಂ| 121. 17ನೇ ಸೆಪ್ಟಂಬರು 1887ನೇ ಇಸವಿ.

ಬಾಗಾಯಿತು ಸಾಗುವಳಿಗೆ ಸರಕಾರದ ಜಮೀನನ್ನು ರಿಯಾಯಿತೀ ಪದ್ಧತ್ತಿನ ಮೇಲೆ ಕೊಡುವದಕ್ಕೋಸ್ಕರವಾಗಿ ಈ ಮುಂದೆ ವಿವರಿಸುವ ನಿಬಂಧನೆಗಳು ಶ್ರೀಮನ್ಮಹಾರಾಜಾ ಸರಕಾರದವರಿಂದ ಮಂಜೂರಾಗಿ ಸರ್ವರಿಗೂ ತಿಳಿಯಲು ಘಾಯಿಷ್‌ಮಾಡಲ್ಪಟ್ಟಿರುತ್ತವೆ:—

1. ತರಂ ಮೊಕರರು ಆಗದೇ ಇರುವ ಸರ್ಕಾರಿ ಬಂಜರಿನಲ್ಲಿ ಧವಸೈರು ಬಾಗಾಯಿತು ಸಾಗುವಳಿಗೋಸ್ಕರ ದರಖಾಸ್ತು ಬಂದರೆ ಇತರ ಅಕ್ಷೇಪಣೆ ಏನೂ ಇಲ್ಲದ ಪಕ್ಷದಲ್ಲಿ ಸದರೀ ಜಮೀನು ದರಖಾಸ್ತುದಾರನಿಗೆ ಈ ಕೆಳಗೆ ವಿವರಿಸುವ ದರಗಳ ಮೇರೆ ಕೊಡಲ್ಪಡುವದು ಹ್ಯಾಗಂದರೆ:

A. ಮಲೆನಾಡಿನ ಅಡಿಕೆ ತೋಟಗಳಿಗೆ.

1ನೇದು.—ಜಮೀನು ಕೊಡಲ್ಪಟ್ಟ ಲಾಗಾಯಿತು ಪುರೂ 12 ವರುಷಗಳವರಿವಿಗೂ ಎಕರೆ 1ಕ್ಕೆ ಸಾಲೀಯಾನಾ 4 ಆಣೆ ಪ್ರಕಾರ.

2ನೇದು.—ಆ ಗ್ರಾಮದಲ್ಲಿ ಅದೇ ತರಹೇದ ತೋಟಗಳಿಗೆ ಬಿದ್ದಿರುವ ಸರಾಸರಿ ಬಾಗಾಯತು ದರದಲ್ಲಿಯಾಗಲಿ, ಅಥವಾ ಆ ಗ್ರಾಮದಲ್ಲಿ ಅಂಥಾ ಬಾಗಾಯತು ಇಲ್ಲದಿದ್ದರೆ ಅಜೂಬಾಜೂ ಗ್ರಾಮದಲ್ಲಿ ಸದರೀ ತರಹೇದ ಬಾಗಾಯತಿಗೆ ಮೊಕರರು ಆಗಿಯಿರುವ ಸರಾಸರೀ ದರದಲ್ಲಿಯಾಗಲಿ, ಅಥವಾ ಡೆಪ್ಯುಟಿ ಕಮ್ಮಿಷನರವರ ರಿಪೋರ್ಟಿನ ಮೇಲಾಗಲಿ, ರೆವಿನ್ಯೂ ಸರ್ವೆ ಸೆಟಲ್‌ಮೆಂಟು ಜಾರೀಗೆ ಬರುವಾಗಲಾಗಲಿ, ಸದರೀ ಸೆಟಲ್‌ಮೆಂಟು ಬದಲಾಯಿಸುವಾಗಾಗಲಿ, ಸರ್ವೆ ಸೂಪರ್ಡಿಟೆಂಡೆಂಟರವರಿಂದ ಮೊಕರರು ಮಾಡಲ್ಪಡುವ ಬಾಗಾಯತು ದರದಲ್ಲಿಯಾಗಲಿ—